## ಕರ್ನಾಟಕ ಅರಣ್ಯ ಇಲಾಖೆ

ಕ್ರಸಂ:ಬಿ2/ಜಿಎಫ್ಎಲ್/ಕೊ-ನ ಟ್ರಾ.ಲೈ/ಸಿಆರ್-/2022-23

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ
ದಿನಾಂಕ: /12/2022.

ಇವರಿಗೆ,

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,**
ಬೆಳಗಾವಿ ವೃತ್ತ, ಬೆಳಗಾವಿ.

**ಮಾನ್ಯರೆ,**

ವಿಷಯ: 400kv D/c (quad) koppal Narendra (new) transmission line forest diversion proposal.

ಉಲ್ಲೇಖ:
1 ಈ ಕಚೇರಿ ಪತ್ರ ಸಂಖ್ಯೆ:ಬಿ2/ಜಿಎಫ್ಎಲ್/ಕೊನಟ್ರಾಲೈ/2022-23/1205 ದಿನಾಂಕ:02-09-2022
2 ವಲಯ ಅರಣ್ಯ ಅಧಿಕಾರಿ, ಪ್ರಾದೇಶಿಕ ವಲಯ, ಬಾಗಲಕೋಟೆರವರ ಕಚೇರಿ ಪತ್ರ ಸಂಖ್ಯೆ:ವಅಅ/ಬಿಜಿಕೆ/ಭೂಮಿ/2022-23 ದಿನಾಂಕ:13-09-2022
3 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಾಗಲಕೋಟೆ ಉಪ ವಿಭಾಗ ಬಾಗಲಕೋಟೆರವರ ಕಚೇರಿ ಪತ್ರ ಸಂಖ್ಯೆ:ಸಅಸಂ/ಬಿಜಿಕೆ/ಅರಣ್ಯಸರ್ವೆ/2022-23/444ದಿನಾಂಕ:14-09-2022
4 ವಲಯ ಅರಣ್ಯ ಅಧಿಕಾರಿ, ಪ್ರಾದೇಶಿಕ ವಲಯ, ಹುನಗುಂದರವರ ಕಚೇರಿ ಪತ್ರ ಸಂಖ್ಯೆ:ವಅಅಹು/ಕೊನಟ್ರಾಲೈ/2022-23/179 ದಿನಾಂಕ:27-09-2022
5 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಾಗಲಕೋಟೆ ಉಪ ವಿಭಾಗ ಬಾಗಲಕೋಟೆರವರ ಕಚೇರಿ ಪತ್ರ ಸಂಖ್ಯೆ:ಸಅಸಂ/ಬಿಜಿಕೆ/ಅರಣ್ಯಸರ್ವೆ/2022-23/498ದಿನಾಂಕ:28-09-2022

– **** –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೊಪ್ಪಳ ನರೇಂದ್ರ ಟ್ರಾನ್ಸಮಿಷನ್ ಲೈನ್ ಕಾಮಗಾರಿಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರು ಸಲ್ಲಿಸಿದ ಪ್ರಸ್ತಾವನೆ ಸಂಖ್ಯೆ: FP/KA/TRANS/152682/2022 ನ್ನು ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್.ಸಿ.ಎ) ಬೆಂಗಳೂರುರವರು ಅಂಗೀಕರಿಸಿದ್ದು, ಈ ಸಂಬಂಧ ಸ್ಥಾನಿಕ ಪರಿಶೀಲನೆ ಮಾಡಿ ಭಾಗ-2 ನ್ನು ಭರ್ತಿ ಮಾಡಿ ಕೂಡಲೇ ಈ ಕಚೇರಿಗೆ ಸಲ್ಲಿಸಲು ವಲಯ ಅರಣ್ಯ ಅಧಿಕಾರಿಗಳು, ಬಾಗಲಕೋಟೆ ಹಾಗೂ ಹುನಗುಂದ ವಲಯದವರಿಗೆ ಉಲ್ಲೇಖ (1)ರಡಿ ತಿಳಿಸಲಾಗಿತ್ತು. ಅದರಂತೆ ವಲಯ ಅರಣ್ಯ ಅಧಿಕಾರಿಗಳು ಬಾಗಲಕೋಟೆರವರು ಈ ಕೆಳಗೆ ತೋರಿಸಿರುವ ಗ್ರಾಮಗಳ ಹೆಸರು ಮತ್ತು ಸರ್ವೆ ನಂಬರಗಳು ಅರಣ್ಯ ಪ್ರದೇಶಗಳಾಗಿರುವುದಿಲ್ಲವೆಂದು ಉಲ್ಲೇಖ (2)ರಡಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಈ ಕಚೇರಿಗೆ ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿದ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ಉಪ ವಿಭಾಗ, ಬಾಗಲಕೋಟೆ ರವರು ಉಲ್ಲೇಖ (3)ರಡಿ ಪರಿಶೀಲನೆ ಮಾಡಿ ಈ ಕಚೇರಿಗೆ ಸಲ್ಲಿಸಿರುತ್ತಾರೆ. ಮುಂದುವರೆದು ವಲಯ ಅರಣ್ಯ ಅಧಿಕಾರಿಗಳು ಹುನಗುಂದರವರು ಈ ಕೆಳಗೆ ತೋರಿಸಿರುವ ಗ್ರಾಮಗಳ ಹೆಸರು ಮತ್ತು ಸರ್ವೆ ನಂಬರಗಳು ಅರಣ್ಯ ಪ್ರದೇಶಗಳಾಗಿರುವುದಿಲ್ಲವೆಂದು ಉಲ್ಲೇಖ (4)ರಡಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಈ ಕಚೇರಿಗೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ಉಪ ವಿಭಾಗ, ಬಾಗಲಕೋಟೆರವರು ಪರಿಶೀಲಿಸಿ ಉಲ್ಲೇಖ (5)ರಡಿ ಈ ಕಚೇರಿಗೆ ಸಲ್ಲಿಸಿರುತ್ತಾರೆ.

| ಕ್ರ. ಸಂ | ತಾಲ್ಲೂಕು | ಗ್ರಾಮದ ಹೆಸರು | ಸರ್ವೆ ನಂ | ಷರಾ |
|---|---|---|---|---|
| 1 | ಬಾಗಲಕೋಟೆ | ನಾಯನೇಗಲಿ | 186,188,187 | ಟ್ರಾನ್ಸಮಿಶನ್ ಲೈನ್ ಕಾಮಗಾರಿ ಹಾಯ್ದುಹೋಗುವ ಈ ಸರ್ವೆ ನಂಬರಗಳು ಅರಣ್ಯ ಪ್ರದೇಶಗಳಾಗಿರುವುದಿಲ್ಲ. |
| 2 | | ಮುದುವಿನಕೊಪ್ಪ | 184,183,180,179,176,175 | |
| 3 | | ಚಿಟಗಿನಕೊಪ್ಪ | 164,163,8,7,10 | |
| 4 | | ದೇವಲಾಪೂರ | 9,11,19,14,16,17 | |

--2

| ಕ್ರ. ಸಂ | ತಾಲ್ಲೂಕು | ಗ್ರಾಮದ ಹೆಸರು. | ಸರ್ವೆ ನಂ | ಷರಾ |
|---|---|---|---|---|
| 1 | ಹುನಗುಂದ | ಗಂಜಿಹಾಳ | 54/1,57/28,59/3,60,108,178,179,180/2,223, 220,223/1,249,264,265,268,274 | ಟ್ರಾನ್ಸಮಿಶನ್ ಲೈನ್ ಕಾಮಗಾರಿ ಹಾಯ್ದು ಹೋಗುವ ಈ ಸರ್ವೆ ನಂಬರಗಳು ಅರಣ್ಯ ಪ್ರದೇಶಗಳಾಗಿರುವುದಿಲ್ಲ. |
| 2 | | ಹಿರೇಮಾಳಗಾಂವಿ | 20,18,15,6,3/25,130/4,127/3,120,116/3,115/1 | |
| 3 | | ಚಿತ್ತರಗಿ | 175,176/1,189,191,193,11/5,11/4,8/2,18/2 | |
| 4 | | ಗಂಗೂರ | 106,39,41,42/1 | |
| 5 | | ಹುಲಿಗನಹಾಳ | 68,60/9,47/2,40,42/1 | |
| 6 | | ಕಲ್ಲಗೋನಾಳ | 9/3,7/1ಎ/2 | |
| 7 | | ರಕ್ಕಸಗಿ | 35/28,34/2,41/1+2+3+4ಡಿ,5/4,3,2/1,124/9 | |
| 8 | | ಹಿರೇಯರಕೇರಿ | 17/2/2,20/18 | |
| 9 | | ಚಿಕ್ಕಯರನಕೇರಿ | 48/2,14/14,24/2,36/2,28/4 | |
| 10 | | ಹೊನ್ನರಳ್ಳಿ | 45/1ಎ/2 | |
| 11 | | ನಾಗೂರ | 114/2ಬಿ,112,105,107,117,155/3,166,163/2 | |

ಈ ಮೇಲಿನಂತೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಾಗಲಕೋಟೆ ಇವರು ವಲಯ ಅರಣ್ಯ ಅಧಿಕಾರಿಗಳು ಬಾಗಲಕೋಟೆ ಹಾಗೂ ಹುನಗುಂದರವರ ವರದಿಯ ಆಧಾರದ ಮೇಲೆ ಸಲ್ಲಿಸಿರುವ ವರದಿಯನುಸಾರ ಪ್ರಸ್ತಾಪಿತ ಪ್ರದೇಶವು ಅರಣ್ಯ ಪ್ರದೇಶವಾಗಿರುವುದಿಲ್ಲ ಹಾಗೂ ಪರಿವೇಶ್ ಪೋರ್ಟಲ್‌ನಲ್ಲಿ ಆನಲೈನ್ ಮುಖಾಂತರ ಈಗಾಗಲೇ ಮಾಹಿತಿಯನ್ನು ಭರ್ತಿ ಮಾಡಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಾಗಲಕೋಟೆ ವಿಭಾಗ, ಬಾಗಲಕೋಟೆ